ಅಸಲು ದಾವಾ 62/2016 ಪಿ ಡಬ್ಲೂಃ 1-ಶಂಕರಲಿಂಗಯ್ಯ

<u>ಸಾಕ್ಷಿಯನ್ನು ದಿನಾಂಕಃ **14.09.2023** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **7** ನೇ ಪ್ರತಿವಾದಿ ಪರ ವಕೀಲರಿಂದಃ</u>

1. ನಮ್ಮ ತಂದೆಗೆ ಆರೋಗ್ಯ ಸರಿ ಇಲ್ಲ ಆದ್ದರಿಂದ ಜಿ ಪಿ ಎ ಕೊಟ್ಟಿದ್ದಾರೆ. 2018 ರಲ್ಲಿ ಅವರು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ನಾನು ಯಾವುದೇ ವೈದ್ಯಕೀಯ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಮೂಲ ಪುರುಷ ಪಿಡ್ಡೇಗೌಡ ಎಂದರೆ ಸರಿ. ಅವರಿಗೆ ಇಬ್ಬರು ಗಂಡ ಮಕ್ಕಳು ಎಂದರೆ ಸರಿ. ಅವರ ಹೆಸರು ದೊಡ್ಡ ನಂಜುಂಡಪ್ಪ ಮತ್ತು ಚಿಕ್ಕ ನಂಜುಂಡಪ್ಪ ಎಂದರೆ ಸರಿ. ದೊಡ್ಡ ನಂಜುಂಡಪ್ಪನವರಿಗೆ ಹೆಣ್ಣು ಮಕ್ಕಳು ಮಾತ್ರ ಇದ್ದರು ಎಂದರೆ ಸರಿ. ಅವರು ನಂಜಮ್ಮ, ನಿಂಗಮ್ಮ ಮತ್ತು ಸಣ್ಣಮ್ಮ ಎಂದರೆಸರಿ. ದೊಡ್ಡ ನಂಜುಂಡಪ್ಪನವರು ನಮ್ಮ ತಂದೆಯ ತಾತ, ನಮಗೆ ಮುತ್ತಾತ.ಚಿಕ್ಕ ನಂಜುಂಡ ನಮ್ಮ ತಂದೆಗೆ ಚಿಕ್ಕ ತಾತ. ನಾನು ದೊಡ್ಡ ನಂಜುಂಡರವರ ವಂಶಸ್ಥನಾಗಿದ್ದೇನೆ. ನಾನು ನಂಜಮ್ಮನವರ ಮೊಮ್ಮಗನಾಗಿದ್ದೇನೆ. ನಮ್ಮ ಅಜ್ಜಿ ನಂಜಮ್ಮನಿಗೆ 4 ಜನ ಮಕ್ಕಳು ಎಂದರೆ ಸರಿಯಲ್ಲ. ಅವರಿಗೆ 3 ಜನ ಮಕ್ಕಳು. ತಮ್ಮೇಗೌಡ, ಬೋರೇಗೌಡ, ಚಿಕ್ಕ ಮರಿಗೌಡ ಮತ್ತು ಚಿಕ್ಕತಾಯಮ್ಮನವರು ಅವರ ಮಕ್ಕಳು ಎಂದರೆ ಸರಿ. ಸಾಕ್ಷಿ ಮುಂದುವರಿದು ಬೋರೇಗೌಡರವರು ಸಣ್ಣಮ್ಮನ ಮನೆಗೆ ದತ್ತಕಕ್ಕೆ ಹೋಗಿದ್ದಾರೆ ಎನ್ನುತ್ತಾರೆ. ಸಣ್ಣಮ್ಮ ನನ್ನ ಅಜ್ಜಿಯ ಕೊನೆ ಸಹೋದರಿ ಎಂದರೆ ಸರಿ. ನಮ್ಮ ತಂದೆಯ ಹೆಸರು ಚಿಕ್ಕ ಮರಿಗೌಡ ಆಗಿರುತ್ತಾರೆ. ಬೋರೇಗೌಡರು ನನ್ನ ತಂದೆಯ ಹಿರಿಯ ಸಹೋದರರು ಅಂದರೆ ನನಗೆ ದೊಡ್ಡಪ್ಪ.ನನ್ನ ಚಿಕ್ಕ ಅಜ್ಜಿ ಸಣ್ಣಮ್ಮನಿಗೆ ಮಕ್ಕಳು ಇಲ್ಲದ ಕಾರಣ ನನ್ನ ದೊಡ್ಡಪ್ಪ ಬೋರೇಗೌಡ ದತ್ತಕಕ್ಕೆ ಹೋಗಿರುತ್ತಾರೆ. ನನ್ನ ದೊಡ್ಡಪ್ಪ

ಬೋರೇಗೌಡರವರು 1951 ರಲ್ಲಿ ನನ್ನ ಚಿಕ್ಕ ಅಜ್ಜಿಗೆ ದತ್ತಕಕ್ಕೆ ಹೋಗಿರುತ್ತಾರೆ. ದತ್ತಕಕ್ಕೆ ಹೋದಾಗಿನಿಂದ ನನ್ನ ದೊಡ್ಡಪ್ಪ ಅವರ ಮನೆಯಲ್ಲಿಯೇ ಬೆಳೆದುದೊಡ್ಡವರಾಗಿರುತ್ತಾರೆ ಎಂದರೆ ಸರಿ.

2. ದಾವಾ ಆಸ್ತಿ ಪಿಡ್ಡೇಗೌಡರಿಗೆ ಹೇಗೆ ಬಂತು ಅಂತ ನನಗೆ ಗೊತ್ತಿಲ್ಲ. ದೊಡ್ಡ ನಂಜುಂಡಪ್ಪನವರ ಹೆಂಡತಿಯ ಹೆಸರು ಮರಿಯಕ್ಕಆಗಿರುತ್ತದೆ. ಪಿಡ್ಡೇಗೌಡರಿಗೆ ಒಟ್ಟು ಎಷ್ಟು ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಮರಿಯಕ್ಕನವರಿಗೆ ಸರ್ವೆ ನಂಬರ್ 7 ಅಂದರೆ ದಾವಾ ಸ್ವತ್ತು ಬಂದಿರುತ್ತದೆ. ಮರಿಯಕ್ಕನವರಿಗೆ ದಾವಾ ಆಸ್ತಿ ಹೇಗೆ ಬಂತೆಂದು ಗೊತ್ತಿಲ್ಲ. ಸಾಕ್ಷಿ ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ಅದು ಪಿಡ್ಡೇಗೌಡರಿಂದ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನ್ಯಾಯಾಲಯದಲ್ಲಿ ತಕರಾರು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಹಾಕಿರುವ ತಕರಾರಿನ ಬಗ್ಗೆ ನಾನು ವಕೀಲರಿಂದ ಮಾಹಿತಿ ಪಡೆದಿದ್ದೇನೆ. ದಾವೆಯಲ್ಲಿ ತರೀಕೆರೆ ಗ್ರಾಮದ ಆಸ್ತಿಗಳನ್ನು ಸೇರಿಸಿಲ್ಲವೆಂದು ಪ್ರತಿವಾದಿಗಳು ಹೇಳಿದ್ದಾರೆ ಎಂದರೆ ಸಾಕ್ಷಿದಾರರು ಸದರಿ ಆಸ್ತಿಗಳು ನಮ್ಮ ತಂದೆಯ ತಂದೆಯಿಂದ ಬಂದ ಆಸ್ತಿಗಳಾಗಿರುತ್ತವೆ ಎನ್ನುತ್ತಾರೆ. ಕೊಪ್ಪ ಹೋಬಳಿಯ ತರೀಕೆರೆಯ ಆಸ್ತಿಗಳು ನನ್ನ ತಾತ ಬೋರೇಗೌಡರ ನವರ ಆಸ್ತಿಗಳು. ನಮ್ಮ ಅಜ್ಜನ ಆಸ್ತಿಗಳು ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗದ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ತರೀಕೆರೆಯ ಆಸ್ತಿಗಳು ಕೂಡ ನಮಗೆ ಪಿಡ್ಡೇಗೌಡರಿಂದ ಬಂದಿದೆ ಎಂದರೆ ಸರಿಯಲ್ಲ. ಅವು ನಮ್ಮ ಅಜ್ಜ ಬೋರೇಗೌಡರಿಂದ ಬಂದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.ದೊಡ್ಡ ನಂಜುಂಡಪ್ಪನವರು ತೀರಿಕೊಂಡ ನಂತರ ಕಂದಾಯ ದಾಖಲೆಗಳು ಅವರ ಪತ್ನಿಯಾದ ಮರಿಯಕ್ಕ ಮತ್ತು ಅವರ ತಮ್ಮನಾದ ಚಿಕ್ಕನಂಜುಂಡಪ್ಪ ನವರ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ಸರಿ. ಆ ನಂತರ ದಾವಾ ಆಸ್ತಿ

ಕಂದಾಯ ದಾಖಲೆ ಚಿಕ್ಕ ನಂಜುಂಡಪ್ಪನವರ ಮಗ ನಂಜಪ್ಪ ಯಾನೆ ಸುಬ್ಬಣ್ಣ ಹಾಗೂ ದತ್ತಕಕ್ಕೆ ಬೋರೇಗೌಡರ ಹೆಸರುಗಳಲ್ಲಿ ಜಂಟಿಯಾಗಿ ಬರುತ್ತಿದ್ದವು ಎಂದರೆ ಸರಿಯಲ್ಲ.

3. ನಾನು 1964 ರಲ್ಲಿ ಹುಟ್ಟಿದ್ದೇನೆ. 1965 ರಲ್ಲಿ ದಾವಾ ಸರ್ವೆ ನಂಬರ್ ನಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಚಿಕ್ಕ ನಂಜುಂಡಪ್ಪನ ಮಗ ನಂಜಪ್ಪ ಯಾನೆ ಸುಬ್ಬಣ್ಣ ರವರು ಕೆಂಪೇಗೌಡ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ನಂತರ ಚಿಕ್ಕೋನು ಬಿನ್ ಅಂಕೇಗೌಡ ಎಂಬುವವರಿಗೆ 20.05.1967 ರಂದು ಅದೇ ಸರ್ವೆ ನಂಬರ್ ನಲ್ಲಿ 2 ಎಕರೆ 7 ಗುಂಟೆ ಜಮೀನನ್ನು ದತ್ತು ಹೋಗಿದ್ದ ಬೋರೇಗೌಡರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರ ವಾರಸುದಾರರನ್ನು ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಲು ನೀವು ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸವರು ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿದ್ದರಿಂದ ಪಕ್ಷಗಾರರನ್ನಾಗಿ ಮಾಡಲು ಕೇಳಿದ್ದೇವೆ ಎನ್ನುತ್ತಾರೆ. ಕಂದಾಯ ದಾಖಲೆಗಳು ನಂಜಪ್ಪ ಯಾನೆ ಸುಬ್ಬಣ್ಣ ಮತ್ತು ಬೋರೆಗೌಡರವರ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ಸರಿಯಲ್ಲ. ನಾನು ತಮ್ಮೇಗೌಡ, ಚಿಕ್ಕ ತಾಯಮ್ಮ, ಚಿಕ್ಕ ಮರಿಗೌಡ ರವರ ಹೆಸರಿಗೆ ಇರುವ ಖಾತೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಅವರ ಹೆಸರಿಗೆ ಬಂದಿರಲಿಲ್ಲ ಎನ್ನುತ್ತಾರೆ.ದಿಃ 10.05.2005 ರಂದು ತಹಶೀಲ್ದಾರ್ ರವರು ಮಾಡಿದ ಆದೇಶವನ್ನು ಎ ಸಿ ರವರು ರದ್ದು ಪಡಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರ ಆದೇಶ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಮ್ಮ ತಂದೆ ಯಾವುದೇ ಭಾಗ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನಾವುಯಾವ ಆಸ್ತಿಯಲ್ಲಿ ಭಾಗ ಕೇಳಿದ್ದೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಪುಟ್ಟ ಸ್ವಾಮಿ ರವರು ದಿಃ 04.09.2014 ರಂದು 21 ಎಕರೆ 02 ಗುಂಟೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.ದಾವೆ ದಾಖಲು ಮಾಡುವಾಗ ಚಿಕ್ಕೋನು

ರವರ ವಾರಸುದಾರರ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಗೊತ್ತಿತ್ತು ಎನ್ನುತ್ತಾರೆ. ನನಗೆ ಗೊತ್ತಿಲ್ಲದ ಕಾರಣದಿಂದಲೇ ಚಿಕ್ಕೋನು ಮತ್ತು ಕೆಂಪೇಗೌಡರ ವಾರಸುದಾರರನ್ನು ಪ್ರಕರಣ ದಾಖಲು ಮಾಡಿದಾಗ ವಾರಸುದಾರರಾಗಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ 37/2015, 38/2015, 39/2015 ಮತ್ತು 40/2015 ಪ್ರಕರಣಗಳು ನಡೆಯುತ್ತಿರುವ ವಿಚಾರ ನನಗೆ ಗೊತ್ತಿದೆ. ಅದು 6 ನೇ ಸರ್ವೆ ನಂಬರ್ ಗೆ ಸಂಬಂದಪಟ್ಟ ಪ್ರಕರಣಗಳು ಎನ್ನುತ್ತಾರೆ. ಈ ದಾವಾ ಸ್ವತ್ತಿಗೆ ಸಂಬಂದಿಸಿದಂತೆಯೇ ಸದರಿ 4 ದಾವಾ ಗಳನ್ನು ಮಾಡಲಾಗಿದೆ ಎಂದರೆ ಆ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ 4 ದಾವೆಗಳಲ್ಲಿ ನನ್ನನ್ನು ಏಕಪಕ್ಷೀಯಗೊಳಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 4 ದಾವೆಗಳ ವಾದಿಗಳು ಈ ಪ್ರಕರಣವನ್ನುದಾಖಲು ಮಾಡಲು ನನ್ನನ್ನು ಎತ್ತಿಕಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸಣ್ಣಮ್ಮನವರು ಅವರ ದತ್ತಕ ಮಗ ಬೋರೇಗೌಡರಿಗೆ ಬಿಟ್ಟುಕೊಟ್ಟಿದ್ದಾನೆ ಎಂದರೆ ಸರಿಯಲ್ಲ.ದಾವಾ ಆಸ್ತಿಯಲ್ಲಿ ಮರಿಯಕ್ಕ ಮತ್ತು ಚಿಕ್ಕ ನಂಜುಂಡಪ್ಪನವರಿಗೆ ಸಮ ಪಾಲು ಇರುತ್ತದೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.